**1 ನೇ ಅಪರ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**
ದಿಃ 14-03-2025 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ      ವಕೀಲರವರಿಂದಃ

ಚಿಕ್ಕವೀರಪ್ಪನವರಿಗೆ 7 ಜನ ಮಕ್ಕಳು. 4 ಜನಗಂಡು ಮಕ್ಕಳು . 3 ಜನ ಹೆಣ್ಣು ಮಕ್ಕಳು , ಅವರುಗಳೆಂದರೆ ಪುಟ್ಟಸ್ವಾಮಿ , ಶೇಖರ , ಶಿವರಾಮು , ರಮೇಶ , ಚಿಕ್ಕಮ್ಮ , ಪುಟ್ಟತಾಯಮ್ಮ , ನಾಗರತ್ನ . ನನ್ನ ತಾತನ ಹೆಸರು ಚೆನ್ನವೀರಯ್ಯ ಎಂದರೆ ಸರಿ . ನನ್ನ ತಾತನ ತಂದೆಯ ಹೆಸರು ಚಿಕ್ಕವೀರೇಗೌಡ . ಅವರನ್ನು ನಾನು ನೋಡಿಲ್ಲ. ಸದರಿಯವರಿಗೆ ಹೊನ್ನಲಗೇಗೌಡ ಮತ್ತು ಹೊನ್ನೇಗೌಡ ಎಂಬ ಇಬ್ಬರು ಮಕ್ಕಳು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಚೆನ್ನವೀರೇಗೌಡ ಮತ್ತು ತಮ್ಮೇಗೌಡ ಎನ್ನುತ್ತಾರೆ. ಚನ್ನವೀರೇಗೌಡ , ತಮ್ಮೆಗೌಡ , ಈರೇಗೌಡ ಎಂಬುವವರು ಹೊನ್ನಲೆಗೌಡರ ಮಕ್ಕಳು ಎಂದರೆ ಸರಿ. ನನ್ನ ತಾಯಿ ಚಿಕ್ಕಮ್ಮ . ಚನ್ನವೀರೇಗೌಡರ ಮಗಳು ಎಂದರೆ ಸರಿ . ನನ್ನ ತಾಯಿಯು ಗೆಜ್ಜಲಗೆರೆಯಿಂದ ಸಾದೋಳಲು ಗ್ರಾಮಕ್ಕೆ ಮದುವೆಯಾದರು ಎಂದರೆ ಸರಿ. ನಾನು ನನ್ನ ಸೋದರ ಮಾವ ಶೇಖರನನ್ನು ಮದುವೆಯಾಗಿದ್ದೇನೆ ಎಂದರೆ ಸರಿ. ಸಿದ್ದರಾಮುರವರ ತಾಯಿಯ ಹೆಸರು ಚಿಕ್ಕಮ್ಮ ಎಂದರೆ ಸರಿ. ಸದರಿಯವರು ಹೊನ್ನೇಗೌಡರ ಮಗಳು ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ತಮ್ಮೇಗೌಡರ ಮಗಳು ಎನ್ನುತ್ತಾರೆ. ಸದರಿ ಚಿಕ್ಕಮ್ಮನನ್ನು ಕೊತ್ತನಹಳ್ಳಿಯ ಅಪ್ಪಾಜಿಗೌಡ ಎಂಬುವವರಿಗೆ ಮದುವೆ ಮಾಡಲಾಗಿತ್ತು ಎಂದರೆ ಸರಿ. ಸದರಿ ಚಿಕ್ಕಮ್ಮ ಮತ್ತು ಅಪ್ಪಾಜೀಗೌಡರ ಮಗ ಸಿದ್ದಯ್ಯ ಎಂಬುವವರನ್ನು ಕಾಳಮ್ಮ ಎಂಬುವರಿಗೆ ದತ್ತು ನೀಡಲಾಗಿತ್ತು ಎಂದರೆ ಸರಿ. ಸದರಿ ಕಾಳಮ್ಮ ಎಂಬುವವರು ಚಿಕ್ಕಮ್ಮ ಎಂಬುವವರ ತಂಗಿ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು

ಚಿಕ್ಕಮ್ಮರವರ ಅತ್ತೆ ಎನ್ನುತ್ತಾರೆ. ನನ್ನ ತಂದೆಯ ಹೆಸರು ಸಿದ್ದೇಗೌಡ. ನಿಪಿ 5 ರಲ್ಲಿ ನಮೂದಾಗಿರುವ ಕ್ರಮ ಸಂಖ್ಯೆ 265 ಮತ್ತು 266 ನನ್ನ ತಂದೆ ಮತ್ತು ತಾಯಿಗೆ ಸಂಬಂಧಿಸಿದೆ.

ನನ್ನ ತಾಯಿ ನನ್ನ ಗಂಡನಿಗೆ ದಾನಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿ. ಸದರಿ ದಾನಪತ್ರ ಹಾಜರು ಪಡಿಸಿದ್ದೇನೆ. ಸದರಿ ದಾನಪತ್ರ ಬರೆಯುವಾಗ ನನ್ನ ತಾಯಿಯು ವಂಶವೃಕ್ಷ ಹಾಜರು ಪಡಿಸಿದ್ದರು ಎಂದರೆ ಸರಿ. ನಿಪಿ 14 ನನ್ನ ತಾಯಿಯ ಗುರುತಿನ ಚೀಟಿ ಎಂದರೆ ಸರಿ. ನನ್ನ ತಂದೆಯ ತಂದೆ ಹೆಸರು ಸಿದ್ದೇಗೌಡ ಎಂದರೆ ಸರಿ. ಸದರಿಯವರನ್ನು ಕೋಳಿ ಸಿದ್ದೇಗೌಡ ಎಂದು ಕರೆಯುತ್ತಿದ್ದರು ಎಂದರೆ ಸರಿಯಲ್ಲ. ಆದ್ದರಿಂದ ನನ್ನ ತಂದೆಯನ್ನು ಸಹಾ ಕೋಳಿಸಿದ್ದೇಗೌಡ ಎಂದು ಕರೆಯುತ್ತಿದ್ದರು ಎಂದರೆ ಸರಿಯಲ್ಲ. ಸರ್ವೆನಂಬರ 146 ರಲ್ಲಿ ಒಟ್ಟು 84 ಜಮೀನು ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನು ತಮ್ಮೇಗೌಡ , ಚನ್ನವೀರೇಗೌಡ ಮತ್ತು ಹೊನ್ನೇಗೌಡರವರಿಗೆ ವಿಭಾಗವಾಗಿತ್ತು . ಸದರಿ ಹೊನ್ನೇಗೌಡ ಎಂಬುವವರು ಸಿದ್ದರಾಮು ರವರ ತಾಯಿ ಚಿಕ್ಕಮ್ಮ ರವರ ತಂದೆ ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ಸಿದ್ದರಾಮುರವರ ತಾಯಿ ಹೆಸರು ಇಬ್ಬರು ಹೆಸರು ಒಂದೇ ಆಗಿರುವುದನ್ನು ಒಂದೇ ಆಗಿರುವುದನ್ನು ದುರಪಯೋಗ ಪಡಿಸಿಕೊಂಡು ನನ್ನ ತಾಯಿ ಮತ್ತು ನನ್ನ ಗಂಡ ದಾವಾ ಸ್ವತ್ತಿನ ಸಂಬಂಧ ದಾನಪತ್ರ ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಿದ್ದರಾಮುರವರ ತಾಯಿ ಚಿಕ್ಕಮ್ಮ ಗೆಜ್ಜಲಗೆರೆ ಯಲ್ಲಿ ವಾಸಿಸುತ್ತಾರೆ ಎಂದರೆ ಸರಿ . ನನ್ನ ತಾಯಿ ಸಾದೋಳಲು ಗ್ರಾಮದಲ್ಲಿ ವಾಸಿಸುತ್ತಾರೆ ಎಂದರೆ ಸರಿ. ನನ್ನ ತಾಯಿಯು ದಾನಪತ್ರದಲ್ಲಿ ತನ್ನ ಗಂಡನ ಹೆಸರನ್ನು ಹೇಳದೇ ಚನ್ನವೀರಯ್ಯನ ಮಗಳು ಎಂದು ಗೆಜ್ಜಲಗೆರೆ ವಿಳಾಸ ನೀಡಿ ಸುಳ್ಳು ದಾನಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸಿದ್ದರಾಮುರವರ ತಾಯಿ ವಿಳಾಸಕ್ಕೆ ಸರಿ

ಹೊಂದುವಂತೆ ಸುಳ್ಳು ವಿಳಾಸ ನೀಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ದಾವ ಸ್ವತ್ತಿನಲ್ಲಿ ಯಾವುದೇ ಹಕ್ಕು ಇಲ್ಲದೇ ಇದ್ದರೂ ದಾನಪತ್ರ ಸೃಷ್ಟಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎಲ್ಲರ ಒಪ್ಪಿಗೆ ಪಡೆದು ಮಾಡಿದ್ದಾರೆ ಎನ್ನುತ್ತಾರೆ. ಸದರಿ ದಾನಪತ್ರ ಮಾಡಲು ನನ್ನ ತಾಯಿಯ ಸಹೋದರರು ಒಪ್ಪಿಗೆ ನೀಡಿದ್ದರು. ದಾವಾ ಸ್ವತ್ತಿನಲ್ಲಿ ನನ್ನ ತಾಯಿಯ ಸಹೋದರರಿಗೂ ಕೂಡಾ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ನನ್ನ ತಂದೆ ಮತ್ತು ತಾತನ ಹೆಸರನ್ನು ತಪ್ಪು ನಮೂದಿಸಿ ಸುಳ್ಳು ವಿಳಾಸ ನೀಡಿ ವಿಚಾರಣೆ ನೀಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಶ್ರೀಮತಿ ನಳಿನ ಎಸ್.ಸಿ.)
1 ನೇ ಅಪರ ಸಿವಿಲ್ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ, ಮದ್ದೂರು